ಕೆ.ಎಸ್. ರಾಜಾರಾಂ



# ಜೀವಚೈತನ್ಯದ ವಸಂತ

**ಚಳಿ** ಕರಗಿದೆ. ಗಿಡ-ಮರಗಳು ಕೊಡೆ ಬಿಚ್ಚಿ ಹಿಡಿದಂತೆ ನಿಂತಿವೆ. ಎಲ್ಲೆಲ್ಲೂ ಹೊಸ ಚಿಗುರು. ಚಿಗುರೆಲೆಗೆ ಹೊರೆಭಾರ ಎಂಬಂತೆ ಹೂವಿನ ಗೊಂಚಲು. ಹಕ್ಕಿಗಳ ಸ್ವರಮೇಳ... ವಸಂತ ಋತುವಿನ ಸ್ಪರ್ಶವೇ ಹಾಗೆ. ಪ್ರಕೃತಿ ನವಸೌಂದರ್ಯದಿಂದ ಕಂಗೊಳಿಸುವುದು ಈ ಋತುವಿನ ಹಿಂಚು ಮುಂಚಿನಲ್ಲೇ. ಜೀವಚೈತನ್ಯವು ಚಿಗುರು, ಮೊಗ್ಗಿನ ರೂಪದಲ್ಲಿ ಚಿಮ್ಮುತ್ತದೆ. ಅದು ಮನಸ್ಸನ್ನು ಉಲ್ಲಾಸಗೊಳಿಸುತ್ತದೆ.

ಕೋಗಿಲೆ ಕೂಗುವುದನ್ನೇ ವಸಂತನ ಆಗಮನದ ಧ್ವನಿಯೆಂದು ಕವಿಗಳು ತಮ್ಮ ಕಥನಗಳಲ್ಲಿ ಪ್ರಸ್ತಾಪಿಸುತ್ತಾರೆ. ಹೊಸ ಚೈತನ್ಯದ ಶುಭಾರಂಭವನ್ನು ಪ್ರಾಕೃತಿಕವಾಗಿ ವಸಂತವು ಸೂಚಿಸುತ್ತದೆ. ಈ ವಸಂತ ಋತು ಕಾವ್ಯದಲ್ಲಿ ಚಿಗುರೊಡೆದು, ಜಾನಪದಗಳಲ್ಲಿ ಆಚರಣೆಗಳ ರೂಪ ಪಡೆದು ನವನವೋನ್ಮೇಷಶಾಲಿಯಾಗಿ ತನ್ನ ಸೌಂದರ್ಯವನ್ನು ಕಾಯ್ದುಕೊಂಡ ಪರಿಯನ್ನು ಡಾ. ಕೃಷ್ಣಮೂರ್ತಿ ಹನೂರು ವಿವರಿಸಿದ್ದಾರೆ.

'ನಕ್ಕರದೇ ಸ್ವರ್ಗ' ಅಂತಾರೆ. ಈ ಮಾತು ನಗೆಯ ಮಹತ್ವವನ್ನು ಒತ್ತಿಹೇಳುತ್ತದೆ. ನಗೆ ದಿನದ ಹಿನ್ನೆಲೆಯಲ್ಲಿ ಹಾಸ್ಯರಸಾಯನ ಉಣಬಡಿಸುವ ಹಲವು ಬರಹಗಳಿವೆ. ಅದನ್ನು ಓದುವಾಗ ನಿಮ್ಮ ಮುಖ ಅರಳಿದರೆ ಬರೆದವರ, ಪ್ರಕಟಿಸಿದವರ ಶ್ರಮ ಸಾರ್ಥಕ. ಅಂದಹಾಗೆ ಮತ್ತೆ ಯುಗಾದಿ ಬಂದಿದೆ. 'ಮಯೂರ' ಓದುಗರಿಗೆ ಹೊಸ ವರುಷದ ಶುಭಾಶಯಗಳು. ಹೊಸ ವರುಷ ಹೊಸ ಹರುಷ ತರಲಿ.

**-ಸಂಪಾದಕ**